ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು

ಸಿ.ಸಿ.1492/2016

| | | | |
|---|---|---|---|
| ಸಾಕ್ಷಿದಾರರ ಹೆಸರು | ಗೋವಿಂದಪ್ಪ | ಪ್ರಮಾಣ ಮಾಡಿದ ದಿನಾಂಕ | 16.08.2022 |
| ತಂದೆಯ ಹೆಸರು | ಕರಿಯಪ್ಪ | | |
| ವಯಸ್ಸು | 76 ವರ್ಷ | | |
| ವೃತ್ತಿ | ನಿವೃತ್ತ ನೌಕರರು | ಚಾಸಾ | 1 |
| ವಾಸಸ್ಥಳ | ಬೆಂಗಳೂರು | ಪ್ರಾಸಾ | 2 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಚಾಸಾ-6 ಗೊತ್ತು. ಚಾಸಾ-6 ರವರು ರವಿಕಿರಣ್ ಲಾಡ್ಜ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ದಿಃ10.12.2015 ರಂದು ಎಲ್.ಜಿ. ಕಂಪನಿಯ ಎರಡು ಟಿವಿ ಕಳ್ಳತನವಾಗಿರುವ ಕುರಿತು ಚಾಸಾ-6 ರವರು ನನಗೆ ಮರುದಿನ ದೂರವಾಣಿ ಮೂಲಕ ವಿಚಾರ ತಿಳಿಸಿರುತ್ತಾರೆ. ನಾನು ಯೋಗಶಿಬಿರದಲ್ಲಿದ್ದ ಕಾರಣ ಕೂಡಲೇ ಬರಲು ಸಾಧ್ಯವಾಗಲಿಲ್ಲ. ರಾತ್ರಿ ಕಳ್ಳತನ ಆಗಿರುತ್ತದೆ ಎಂದು ನನಗೆ ತಿಳಿಸಿರುತ್ತಾರೆ. ಸದರಿ ಕಳ್ಳತನವು ರೂ.ನಂ.207 ಮತ್ತು 208 ರಲ್ಲಿ ಆಗಿರುತ್ತದೆ. ರೂ.ನಂ.207 ಮತ್ತು 208 ರ ಕೊಠಡಿಗಳನ್ನು ಯಾರು ಬಾಡಿಗೆಗೆ ತೆಗೆದುಕೊಂಡಿದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಚಾಸಾ-6 ರವರು ಫೋನ್ ಮಾಡಿದ 15 ದಿನಗಳ ನಂತರದಲ್ಲಿ ಕಡೂರಿಗೆ ಬಂದಿರುತ್ತೇನೆ. ಸದರಿ ಟಿವಿಗಳನ್ನು ರೂಂನ ಗೋಡೆಗೆ ಅಳವಡಿಸಲಾಗಿತ್ತು. ಎರಡೂ ಟಿವಿಗಳ ಬೆಲೆ ಸುಮಾರು ರೂ.25,000/-ಗಳು ಆಗಿರಬಹುದು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಸುಮಾರು 7-8 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ.

ಸದರಿ ದಾಖಲೆಗಳಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ಈಗ ಹೇಳಲು ನೆನಪಿರುವುಹಿದಿಲ್ಲ. ನಿಪಿ-1 ಕ್ಕೆ ಎಲ್ಲಿ ಮತ್ತು ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ-1 ನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗು ಬರೆದಿರುತ್ತಾರೆ ಎಂದು ನನಗೆ ನೆಬನಪಿರುವುದಿಲ್ಲ. ಸಾಕ್ಷಿ ನಿಪಿ-2 ಮತ್ತು 3 ರ ಛಾಯಾಚಿತ್ರಗಳನ್ನು ತೋರಿಸಲಾಗಿ ಸದರಿ ಛಾಯಾಚಿತ್ರಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾಚಿತ್ರಗಳಲ್ಲಿ ಚಾಸಾ-2 ರವರ ಇರುವಿಕೆಯನ್ನು ಸಹ ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಛಾಯಾಚಿತ್ರಗಳನ್ನು ಕಳ್ಳತನವಾದ ವಿಚಾರವಾಗಿ ನಮ್ಮ ಲಾಡ್ಜ್ ನಲ್ಲಿ ತೆಗೆದಿರುತ್ತಾರೆ. ಒಂದು ವರ್ಷದ ನಂತರದಲ್ಲಿ ಎರಡೂ ಟಿವಿಗಳನ್ನು ನನಗೆ ವಾಪಸ್ಸು ಪೋಲೀಸ್ ಠಾಣೆಯಲ್ಲಿ ನೀಡಿರುತ್ತಾರೆ. ಸದರಿ ಟಿವಿಗಳನ್ನು ನೀಡುವ ಸಮಯದಲ್ಲಿ ಬೇರೆ ಯಾರು ಇದ್ದರು ಎಂದು ಈಗ ನನಗೆ ಹೇಳಲು ಗೊತ್ತಾಗುವುದಿಲ್ಲ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ ಸದರಿ ಛಾಯಾಚಿತ್ರಗಳಲ್ಲಿ ಕಾಣುವ ಎರಡು ಟಿವಿಗಳನ್ನು ಪೋಲೀಸರು ನನಗೆ ಪೋಲೀಸ್ ಠಾಣೆಯಲ್ಲಿ ನೀಡಿದ್ದರು ಎಂದು ಹೇಳಿದ ಮೇರೆಗೆ ಸದರಿ ಛಾಯಾಚಿತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)**

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ನಾನು ಬೆಂಗಳೂರಿನ ಅರಿಶಿನಕುಂಟೆ, ಆದರ್ಶನಗರದಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಕಡೂರು ನಗರದಲ್ಲಿರುವ ರವಿಕಿರಣ್ ರೆಸಿಡೆನ್ಸಿ ಲಾಡ್ಜನ ಮಾಲೀಕ ಎಂದರೆ ಸರಿ. ನಾನು ಆಗಾಗ ಕಡೂರು ನಗರಕ್ಕೆ ಬಂದು ಹೋಗುತ್ತಿರುತ್ತೇನೆ ಎಂದರೆ ಸರಿ. ರಾತ್ರಿ 11.30 ಗಂಟೆಗೆ ನಾಲ್ಕು ಜನ ಹುಡುಗರು ಬಾಡಿಗೆಗೆ ರೂಂಗಳನ್ನು ಪಡೆದಿದ್ದರು ಎಂದು ಚಾಸಾ-6 ರವರು ತಿಳಿಸಿರುತ್ತಾರೆ ಎಂದರೆ ಸರಿ. ಮರುದಿನ ಬೆಳಿಗ್ಗೆ 6.00 ಗಂಟೆಗೆ ಎದ್ದು ನೋಡಿದಾಗ ಆ ರೂಂನಲ್ಲಿ ಆ ಹುಡುಗರು ಇರಲಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯೋಗಶಿಬಿರದಲ್ಲಿದ್ದ ಕಾರಣ ಕೂಡಲೇ ಪೋಲೀಸ್ ಠಾಣೆಗೆ ಬಂದು ದೂರನ್ನು ನೀಡಲು ಆಗಿರಲಿಲ್ಲ ಎಂದರೆ ಸರಿ, ಆ ಕಾರಣದಿಂದ ತಡವಾಗಿ ಬಂದು ದೂರು ನೀಡಿರುತ್ತೇನೆ ಎಂದರೆ ಸರಿ.

| | |
|---|---|
| ಚಾಸಾ | 1 |
| ಪ್ರಾಸಾ | 2 |

ನಾನು ಸ್ಥಳ ತೋರಿಸಿದ ಮೇರೆಗೆ ದಿಃ30.12.2015 ರಂದು ಪೋಲೀಸರು ಘಟನಾ ಸ್ಥಳಕ್ಕೆ ಬಂದು ಸಂಜೆ 4.30 ರಿಂದ 5.45 ರವರೆಗೆ ಸ್ಥಳ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತಾರೆ ಎಂದರೆ ಸರಿ. ನಿಪಿ-2 ಮತ್ತು 3 ರಲ್ಲಿ ಚಾಸಾ-3 ರವರು ಸಹ ಇರುತ್ತಾರೆ ಎಂದರೆ ಸರಿ.

ದಿಃ31.12.2015 ನಾನು ಮನೆಯಲ್ಲಿರುವಾಗ ಕಡೂರು ಪೋಲೀಸರು ಕರೆ ಮಾಡಿ ಠಾಣೆಗೆ ಬರಲು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ದಿನ ಪೋಲೀಸ್ ಠಾಣೆಗೆ ಬಂದಾಗ 5 ಜನ ಆರೋಪಿತರನ್ನು ತೋರಿಸಿ, ಇವರೇ ನಿಮ್ಮ ಲಾಡ್ಜ್ ನಲ್ಲಿ ಕಳ್ಳತನ ಮಾಡಿದವರು ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಪೋಲೀಸ್ ಠಾಣೆಯಲ್ಲಿ ನೋಡಿದ ಆರೋಪಿತರು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರುಗಳಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರುಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- 5 ನೇ ಆರೋಪಿ ಪರ ಶ್ರೀ ಸಿ.ವಿ.ಎಸ್.ವಕೀಲರಿಂದಃ**

ನಾನು ನಿವೃತ್ತ ಎಕ್ಸೈಸ್ ಡೆಪ್ಯುಟಿ ಕಮೀಷನರ್ ಎಂದರೆ ಸರಿ. 2003 ರಿಂದ 2005 ರವರೆಗೆ ಕರ್ತವ್ಯದಲ್ಲಿದ್ದೆ. ರವಿಕಿರಣ್ ಲಾಡ್ಜ್ ನನ್ನ ಮಾಲೀಕತ್ವದಲ್ಲಿ ಇದೆ ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಲಾಡ್ಜ್ ನಡೆಸುತ್ತಿರುವ ಕುರಿತು ಪರವಾನಗಿ ಪಡೆದ ಬಗ್ಗೆ ಪೋಲೀಸರಿಗೆ ನೀಡಿರುತ್ತೀರಾ ಎಂದರೆ, ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ10.12.2015 ರಿಂದ 30.12.2015 ರವರೆಗು ಯೋಗಶಿಬಿರದಲ್ಲಿ ಇದ್ದ ಕುರಿತು ಪೋಲೀಸರಿಗೆ ದಾಖಲೆಗಳನ್ನು ನೀಡಿರುತ್ತೀರಾ? ಎಂದರೆ, ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನೀವು ರೂಂನ್ನು ಬಾಡಿಗೆಗೆ ನೀಡುವಾಗ ಯಾರು ರೂಂನ್ನು ಬಾಡಿಗೆಗೆ ಕೇಳುತ್ತಾರೋ ಅವರ ವಿಳಾಸದ ಕುರಿತು ದಾಖಲೆಗಳನ್ನು ಪಡೆದು ನೀಡುತ್ತೀರ ಎಂದರೆ ಸರಿ. ರಾದೀಪು ಬಿನ್

ಜಯಕುಮಾರ್, ಮಗರಹಳ್ಳಿ ರವರಿಗೆ ರೂಂ ನಂ.207 ಮತ್ತು 208 ನ್ನು ಬಾಡಿಗೆಗೆ ನೀಡಿದ ಕುರಿತು ನಮೂದು ಇರುತ್ತದೆ ಎಂದರೆ, ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗು ಆರೋಪಿತರಿಗು ಯಾವುದೇ ಹೋಲಿಕೆ ಇಲ್ಲ ಎಂದರೆ, ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮರುದಿನ ಬೆಳಗ್ಗೆ ದೂರನ್ನು ನೀಡಲು ಚಾಸಾ-6 ರವರಿಗೆ ಹಾಗೂ ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ, ಸಾಕ್ಷಿಯು ದೂರು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಲಾಡ್ಜ್ ನಡೆಸಲು ಪರವಾನಗಿ ಪಡೆದುಕೊಳ್ಳಬೇಕು ಎಂದರೆ, ಸಾಕ್ಷಿಯು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಲಾಡ್ಜ್ ನಲ್ಲಿ ಯಾವ ರೀತಿ ರೂಂಗಳನ್ನು ಬಾಡಿಗೆಗೆ ಕೊಡಬೇಕು ಎಂದು ಷರತ್ತುಗಳು ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-6 ರವರು ಇಂತಹವರೇ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಏನು ಬರೆದಿರುತ್ತದೆ ಎಂದು ಖುದ್ದಾಗಿ ನೀವು ಓದಿ ತಿಳಿದುಕೊಂಡಿರುತ್ತೀರಾ ಎಂದರೆ, ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಲೀಸರು ನಿಪಿ-1 ರಲ್ಲಿ ಏನು ಬರೆದಿರುತ್ತಾರೆ ಎಂದು ನಿಮಗೆ ಓದಿ ತಿಳಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ಛಾಯಾಚಿತ್ರವನ್ನು ರೂಂನ ಹೊರಗಡೆಯಿಂದ ತೆಗೆಯಲಾಗಿರುತ್ತದೆ ಎಂದರೆ ಸರಿ. ನಿಪಿ-2 ಮತ್ತು ನಿಪಿ-3 ರಲ್ಲಿ 208 ರೂಂ ಕುರಿತು ನಮೂದು ಇರುವುದಿಲ್ಲ ಎಂದರೆ ಸರಿ. ರೂಂ ನಲ್ಲಿ ನಾವು ಎರಡು ಟಿವಿಗಳನ್ನು ಗೋಡೆಗೆ ಅಳವಡಿಸಲಾಗಿತ್ತು. ನಿಪಿ-3 ರಲ್ಲಿ ಟಿವಿಯನ್ನು ಗೋಡೆಗೆ ಅಳವಡಿಸಲಾಗಿರುವ ಕುರಿತು ಯಾವುದೇ ಸಾಕ್ಷ್ಯವು ಕಾಣುತ್ತಿಲ್ಲ ಎಂದರೆ, ಸಾಕ್ಷಿಯು ಸದರಿ ಛಾಯಾಚಿತ್ರವನ್ನು ಹೊರಗಡೆಯಿಂದ ತೆಗೆಯಲಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-2 ನನ್ನ ಕೈ ಕೆಳಗೆ ಬಾಡಿಗೆದಾರರಾಗಿರುತ್ತಾರೆ ಎಂದರೆ ಸರಿ. ನಮ್ಮ ಲಾಡ್ಜ್ ಮೂರು ಅಂತಸ್ತಿನ ಕಟ್ಟಡವಾಗಿರುತ್ತದೆ. ಸದರಿ ಕಟ್ಟಡದ ಎರಡನೆಯ ಅಂತಸ್ತನ್ನು ಲಾಡ್ಜ್ ಆಗಿ ಉಪಯೋಗಿಸುತ್ತೇವೆ. ನೆಲ ಅಂತಸ್ತಿನಲ್ಲಿ ಮನೆ ಮತ್ತು ವಾಣಿಜ್ಯ ಕಟ್ಟಡಗಳು ಹಾಗೂ ಒಂದನೇ ಅಂತಸ್ತಿನಲ್ಲಿ ರೂಂಗಳನ್ನು ಬಾಡಿಗೆಗೆ ನೀಡಿರುತ್ತೇನೆ. ಒಂದನೇ ಅಂತಸ್ತಿನಲ್ಲಿ ಯಾವುದೇ ಲಾಡ್ಜ್ ಇಲ್ಲ ಎಂದರೆ ಸರಿ.

ಸಿ.ಸಿ.1492/2016

| | |
|---|---|
| ಚಾಸಾ | 1 |
| ಪ್ರಾಸಾ | 2 |

ಪೋಲೀಸರು ಬರೆದಿರುವ ಕಚ್ಛಾ ನಕ್ಷೆಯನ್ನು ನಾನು ನೋಡಿರುವ ಕುರಿತು ನೆನಪಿರುವುದಿಲ್ಲ. ಕಚ್ಛಾ ನಕ್ಷೆಯಲ್ಲಿ ತಿಳಿಸಿರುವಂತೆ ರೂಂಗಳು ಇರುವುದಿಲ್ಲ ಎಂದರೆ ಸರಿ. ಲಾಡ್ಜನಲ್ಲಿ ಯಾವುದೇ ಕಳ್ಳತನ ಆಗದಿದ್ದರೂ ಸಹ ಅಕ್ರಮವಾಗಿ ಲಾಭ ಪಡೆಯುವ ಸಲುವಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- 1,3 ಮತ್ತು 4 ನೇ ಆರೋಪಿತರುಗಳ ಪರ ಶ್ರೀ ಜಿ.ಎನ್.ವಿ. ಹಾಗೂ 2 ನೇ ಆರೋಪಿ ಪರ ವಕೀಲರಾದ ಶ್ರೀ ಯು.ಎಸ್. ವಕೀಲರುಗಳು 5 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು